ಸೀರೆಯಾಗಿದ್ದರೆ ಬಾರ್ಡರ್ ಅಗಲವಿದ್ದರೆ ಚಂದ. ಹೂವಿನ ಪೇಂಟಿಂಗ್‌ಗಳ ಮೇಲೆ ಮುತ್ತು ಅಥವಾ ಹರಳುಗಳು ರಿಚ್ ಲುಕ್ ಕೊಡುತ್ತದೆ. ಕಸೂತಿ ಮಾಡುವುದರಿಂದ ಪೇಂಟಿಂಗ್‌ಗಳ ಅಂದ ಹಾಳಾಗುವ ಸಾಧ್ಯತೆ ಇದೆ.

ಸೀರೆಯ ತುಂಬಾ ಒತ್ತೊತ್ತಾಗಿ ಹೂವಿನ ಚಿತ್ತಾರ ಇದ್ದಾಗ ಪ್ಲೇನ್ ಬ್ಲೌಸ್ ಧರಿಸುವುದು ಸೂಕ್ತ. ಬ್ಲೌಸ್ ಪ್ಲೇನ್ ಆಗಿ ತಿಳಿ ಬಣ್ಣದಲ್ಲಿದ್ದರೆ ಸೀರೆ ಆಕರ್ಷಕವಾಗಿ ಕಾಣುತ್ತದೆ. ಸೀರೆಯಲ್ಲಿ ಹೂವಿನ ಪ್ರಿಂಟ್ ಬೆರಳೆಣಿಕೆಯಷ್ಟು ಇದ್ದಾಗ ಅದೇ ಡಿಸೈನ್‌ನಲ್ಲಿ ರವಿಕೆ ಹೊಲಿಸಿಕೊಳ್ಳಿ. ಸಿಂಗಲ್ ನೆರಿಗೆ ಹಾಕಿಕೊಂಡು ಒಂದೇ ನೆರಿಗೆಗೆ ಪಿನ್ ಹಾಕಿ ಧರಿಸುವಿರಾದರೆ ಸ್ಲೀವ್‌ಲೆಸ್ ರವಿಕೆ ಉತ್ತಮ. ಇಲ್ಲವಾದರೆ ಕೋಲ್ಡ್ ಶೋಲ್ಡರ್, ಬ್ಯಾಕ್‌ಲೆಸ್ ಬ್ಲೌಸ್, ಕಾಲರ್ ನೆಕ್, ಜಾಕೆಟ್ ಬ್ಲೌಸ್‌ಗಳು ಸ್ಟೈಲಿಷ್ ಲುಕ್ ಕೊಡುತ್ತವೆ. ಜಾಸ್ತಿ ನೆರಿಗೆ ಹಿಡಿದು ಸೆರಗು ಮಾಡಿಕೊಳ್ಳುವಿರಾದರೆ ಅದರದ್ದೇ ಮ್ಯಾಚಿಂಗ್ ಬ್ಲೌಸ್ ಧರಿಸಬೇಕು. ಸಿಂಪಲ್ ಸೆರಗು ಬೇಸರ ಎನಿಸಿದರೆ ಶೋಲ್ಡರ್ ಮೇಲೆ ಒಂದು ರಬ್ಬರ್ ಬ್ಯಾಂಡ್ ಹಾಕಿಕೊಂಡು ಹೂವಿನ ರೀತಿ ಸೀರೆಯಲ್ಲಿಯೇ ದಳಗಳನ್ನು ಮಾಡಿ ಮಧ್ಯದಲ್ಲಿ ಒಂದು ಚಂದದ ಬ್ರೋಚ್ ಸಿಕ್ಕಿಸಿಕೊಂಡರೆ ಚಂದದ ದಳಗಳ ಹೂವು ಭುಜದ ಮೇಲೆ ರಾರಾಜಿಸುತ್ತದೆ. ಈ ತರಹದ ಹೂವಿನ ಸೆರಗು ಫ್ಲೋರಲ್ ಪ್ರಿಂಟ್ ಸೀರೆಗೆ ಅತ್ಯಾಕರ್ಷಕ.

ಇತ್ತೀಚಿನ ಟ್ರೆಂಡ್ ಆಗಿರುವ ಫ್ರಿಲ್ಸ್ ಸೀರೆ ಫ್ಲೋರಲ್ ಪ್ರಿಂಟ್‌ನಲ್ಲಿದ್ದರಂತೂ ಅದ್ಭುತ. ಹಬ್ಬಗಳನ್ನು ಫ್ಲೋರಲ್ ಪ್ರಿಂಟ್ ಸೀರೆಯೊಂದಿಗೆ ಸಂಭ್ರಮಿಸಿ. ಮ್ಯಾಚಿಂಗ್ ಜ್ಯುವೆಲರಿ ಸೆಟ್, ಬಳೆ, ಕಿವಿಯೋಲೆಗಳ ಸಂಗ್ರಹ ಜೊತೆಯಾಗಿರಲಿ.

ಕ್ಯಾಶುವಲ್ ಮತ್ತು ಫಾರ್ಮಲ್ ಸಂದರ್ಭಕ್ಕನುಗುಣವಾಗಿ ಫ್ಲೋರಲ್ ಮ್ಯಾಕ್ಸಿ ಡ್ರೆಸ್ ಜಬರ್ದಸ್ತ್ ಸ್ಟೈಲ್ ಸ್ಟೇಟ್‌ಮೆಂಟ್ ಮೆರೆಯುವಂತೇ ಮಾಡುತ್ತದೆ. ಯಾವುದೇ ಟಾಪ್, ಟೀಶರ್ಟ್ ಇರಲಿ ಜೊತೆಗೆ ಫ್ಲೋರಲ್ ಪ್ರಿಂಟೆಡ್ ಪ್ಯಾಂಟ್ ಮತ್ತೊಂದು ಸಮಂಜಸ ಆಯ್ಕೆ.

## ಕೆಲವೊಂದು ಟಿಪ್ಸ್

- ಡಿಸೈನ್‌ಗಳಿಲ್ಲದ ಉಡುಪು ಧರಿಸಿದಾಗ ಫ್ಲೋರಲ್ ಪ್ರಿಂಟ್ ಇರುವ ಜಾಕೆಟ್ ಅಂದವಾಗಿ ಕಾಣುತ್ತದೆ. ತಿಳಿ ಬಣ್ಣದ ಉಡುಪಿಗೆ ಬಣ್ಣ ಬಣ್ಣದ ಫ್ಲೋರಲ್ ಪ್ರಿಂಟ್ ಚೆನ್ನಾಗಿ ಕಾಣಿಸುತ್ತದೆ. ಜಂಪ್ ಸೂಟ್, ಪಲಾಜೊ ಪ್ಯಾಂಟ್, ಮಿನಿ ಸ್ಕರ್ಟ್‌ಗಳ ಮೇಲೂ ಹೂವಿನ ಚಿತ್ತಾರ ಫ್ಯಾಷನಬಲ್ ನೋಟ ನೀಡುತ್ತದೆ.
- ಫ್ಲೋರಲ್ ಪ್ರಿಂಟೆಡ್ ಸ್ಕಾರ್ಫ್ ಜನಪ್ರಿಯ ಟ್ರೆಂಡ್. ಜೀನ್ಸ್, ಟೀಶರ್ಟ್, ಶರ್ಟ್ ಡ್ರೆಸ್‌ಗಳಿಗಷ್ಟೇ ಅಲ್ಲದೆ ಟ್ರೆಡಿಷನಲ್ ಕುರ್ತಾ, ಟಾಪ್‌ಗಳಿಗೂ ಸೂಕ್ತ. ಹೂವಿನ ಚಿತ್ತಾರದ ಹಳೇ ಸೀರೆಗಳನ್ನು ಕತ್ತರಿಸಿ ಕೂಡ ಸ್ಕಾರ್ಫ್‌ನಂತೆಯೇ ಬಳಸಬಹುದು.
- ಸ್ಟೈಲಿಷ್ ಲುಕ್‌ಗಾಗಿ ಹೂವಿನ ವಿನ್ಯಾಸವಿರುವ ಟೀಶರ್ಟ್ ಮತ್ತು ಶರ್ಟ್ ಡ್ರೆಸ್ ಬೆಸ್ಟ್ ಚಾಯ್ಸ್. ಇದರ ಜೊತೆಗೆ ಕಾಂಟ್ರಾಸ್ಟ್ ಕಲರ್ ಜೀನ್ಸ್ ಅಥವಾ ಡೆನಿಮ್ ಆರಿಸಿ.
- ಜೊತೆಗೆ ಫ್ಲೋರಲ್ ಶೂಸ್ ವಿಶೇಷ ಅಂದ ಕೊಡುತ್ತದೆ. 3ಡಿ ಫ್ಲೋರಲ್ ಡಿಸೈನ್ ಶೂ ಹೊಸ ಟ್ರೆಂಡ್. ಫ್ಲೋರಲ್ ಪ್ರಿಂಟ್ ವೆಸ್ಟರ್ನ್ ಡ್ರೆಸ್ ಜೊತೆಗೆ ಇಂತಹ ಶೂ ಉತ್ತಮ ಆಯ್ಕೆಯೇ ಆಗಿದೆ.

ಸಮರ್ಪಕ ಬಣ್ಣ ಮತ್ತು ವಿನ್ಯಾಸದಲ್ಲಿ ಪ್ಯಾಂಟ್ ಆರಿಸಿಕೊಂಡರೆ ಸ್ಪೆಷಲ್ ಆಗಿ ಕಾಣಿಸುವಿರಿ. ಫ್ಲೋರಲ್ ಥೀಮ್ ಪೂರ್ಣಗೊಳಿಸಲು ಹೂಗಳ ಆಕಾರದ ಹ್ಯಾಂಡ್ ಬ್ಯಾಗ್, ರಬ್ಬರ್ ಬ್ಯಾಂಡ್, ಹೇರ್ ಆಕ್ಸೆಸರೀಸ್, ಹೂವಿನ ಡಿಸೈನ್ ಇರುವ ಬಳೆ ಅಥವಾ ಬ್ರೆಸ್ಲೆಟ್, ಪ್ರಿಂಟೆಡ್ ಟರ್ಬನ್ ನಾಟ್‌ಗಳ ಹೆಡ್ ಬ್ಯಾಂಡ್ ಕಾಲೇಜು ಹುಡುಗಿಯರಿಗೆ ಸೂಕ್ತ.

ಕೇವಲ ಬಟ್ಟೆಗಳಿಗಷ್ಟೇ ಅಲ್ಲದೆ ಕಿವಿಯೋಲೆ, ಸರ, ಬಳೆಗಳಲ್ಲಿಯೂ ಈ ಹೂವಿನ ಚಿತ್ತಾರ ಟ್ರೆಂಡ್ ಎನಿಸಿದೆ. ಕಮಲ, ಗುಲಾಬಿ ಹೂವುಗಳ ಡಿಸೈನ್ ಇರುವ ಬಂಗಾರದ ಒಡವೆ ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿತ್ತು. ಬದಲಾದ ಫ್ಯಾಷನ್ ಪರಿಭಾಷೆಯಲ್ಲಿ ಆರ್ಟಿಫಿಷಿಯಲ್ ಜ್ಯುವೆಲರಿಗಳಲ್ಲಿ ಹೂಗಳ ಹವಾ ಜೋರಾಗಿದೆ. ಬ್ರೈಡಲ್ ಜ್ಯುವೆಲರಿಗಳಲ್ಲಿ ಹೂಗಳನ್ನೇ ಹೆಚ್ಚಾಗಿ ಬಳಸಲಾಗುತ್ತದೆ. ಗುಲಾಬಿ, ಮಲ್ಲಿಗೆ, ಸುಗಂಧರಾಜ ಹೂಗಳ ಬೈತಲೆ ಬೊಟ್ಟು, ಬಳೆ, ಓಲೆ ಅರಿಶಿನ ಶಾಸ್ತ್ರ ಮತ್ತು ಮೆಹೆಂದಿ ಶಾಸ್ತ್ರಗಳಲ್ಲಿ ಪ್ರಮುಖ ಆಕರ್ಷಣೆ ಆಗಿದೆ.



### ಹಬ್ಬಕ್ಕೂ ಹೂವಿನುಡುಗೆ

ಹಬ್ಬ ಹರಿದಿನಗಳಂದು ಸಾಂಪ್ರದಾಯಿಕ ಉಡುಪುಗಳಿಗೇ ಆದ್ಯತೆಯಾದರೂ ಇಂದು ಪರಂಪರೆಗೆ ಧಕ್ಕೆಯಾಗದಂತೆ ಆಧುನಿಕತೆ ಉಡುಪುಗಳು ಟ್ರೆಂಡ್ ಸೃಷ್ಟಿಸುತ್ತಿವೆ. ಫ್ಯಾಷನ್‌ಗೆ ಸೂಕ್ತವಾದ ಉಡುಪುಗಳು ಮಾರುಕಟ್ಟೆಯಲ್ಲಿ ಲಭ್ಯವಿದ್ದು ಹಲವು ರೀತಿಯಲ್ಲಿ ಹೊಸತನದಿಂದ ಕೂಡಿವೆ. ಈ ಹೊಸ ಉಡುಪುಗಳು ಹಬ್ಬದ ಸಂಭ್ರಮವನ್ನು ಇಮ್ಮಡಿಸಲೆಂದೇ ರೂಪುಗೊಂಡವುಗಳು.

ಯುವತಿಯರು ಸಾಮಾನ್ಯವಾಗಿ ಜೀನ್ಸ್ ಪ್ಯಾಂಟ್ ಇಷ್ಟಪಟ್ಟರೂ ಹಬ್ಬದ ದಿನ ಎಥ್ನಿಕ್ ಟಾಪ್ ಧರಿಸಲು ಇಷ್ಟಪಡುತ್ತಾರೆ. ಇದಕ್ಕಾಗಿ ಫ್ಲೋರಲ್ ಹ್ಯಾಂಡ್ ಪ್ರಿಂಟೆಡ್ ಟಾಪ್, ಮಲ್ಟಿ ಕಲರ್ ಎಂಬ್ರಾಯಿಡರಿ ವರ್ಕ್ ಇರುವ ಉಡುಗೆಗಳು ಸಖತ್ ಲುಕ್ ಕೊಡುತ್ತವೆ. ಸಿದ್ಧ ಉಡುಪು ಮಳಿಗೆಗಳು 'ಗೋ ಟ್ರೆಡಿಷನಲ್', ಮಿಕ್ಸ್ ಅಂಡ್ ಮ್ಯಾಚ್, ಎಥ್ನಿಕ್ ಕ್ರಾಪ್ ಟಾಪ್, ಫೆಸ್ಟಿವ್ ಡ್ರೆಸಿಂಗ್ ಮುಂತಾದ ಹೆಸರಿನಲ್ಲಿ ಸೀರೆ, ಸಲ್ವಾರ್, ಟಾಪ್, ಸ್ಕರ್ಟ್‌ಗಳನ್ನು ಹೊರತಂದಿವೆ. ಟ್ರೆಡಿಷನಲ್ ಮಾದರಿಯ ಉಡುಪು ಮಕ್ಕಳಿಂದ ಹಿಡಿದು ಹಿರಿಯರವರೆಗೂ ಸಾಂಪ್ರದಾಯಿಕ ಲುಕ್ ಕೊಡುತ್ತವೆ. ಇದರಲ್ಲಿ ಕೆಂಪು, ಹಳದಿ, ಹಸಿರು, ನೀಲಿ ಬಣ್ಣಗಳ ಬಾಂದನಿ ಸೀರೆ ಲಭ್ಯ.

ಎಥ್ನಿಕ್ ಕ್ರಾಪ್ ಟಾಪ್ ಅನ್ನು 'ಮಿಕ್ಸ್ ಅಂಡ್ ಮ್ಯಾಚ್' ಪರಿಕಲ್ಪನೆಯಲ್ಲಿ ಹೊರತರಲಾಗಿದ್ದು, ಇದರಲ್ಲಿ ಗಾಗ್ರಾ, ಕುರ್ತಿ ಹಾಗೂ ಹಾಫ್ ಸಾರಿ ಲಭ್ಯ. ಪುಟ್ಟ ಹುಡುಗಿಯರು ಎರಡು ಜಡೆ ಹಾಕಿ ಜುಮ್ಕಾ ಧರಿಸಿ ಅಡ್ಡಾಡುವುದನ್ನು ನೋಡುವುದೇ ಹಬ್ಬ, ಇದೇ ಮಾದರಿಯ ಉಡುಗೆ 'ಫೆಸ್ಟಿವ್ ಸರಣಿ'ಯಲ್ಲೂ ಸಿಗುತ್ತದೆ.

ಫ್ಯಾಷನ್, ಗ್ಲ್ಯಾಮರ್‌ಗೆ ಒತ್ತು ನೀಡುವ ಹೆಂಗಳೆಯರು ಹಬ್ಬದ ಸಂದರ್ಭದಲ್ಲಿ ಎಥ್ನಿಕ್ ಉಡುಪುಗಳ ಮೊರೆ ಹೋಗುತ್ತಾರೆ. ಬಟ್ಟೆ, ಬಣ್ಣ, ಸ್ಟೈಲ್, ಗ್ಲ್ಯಾಮರ್ ಲೆಕ್ಕಾಚಾರಗಳೇನೇ ಇದ್ದರೂ ಫ್ಯಾಷನಬಲ್ ಸಲ್ವಾರ್, ಸೀರೆಗಳತ್ತ ಚಿತ್ತಹರಿಸುವುದು ಒಳ್ಳೆಯ ಬೆಳವಣಿಗೆ. ■